# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕಾಚೇನಹಳ್ಳಿ ಏತ ನೀರಾವರಿ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

++ ++ ++

ಓದಲಾಗಿದೆ :-

ಮುಖ್ಯ ಇಂಜಿನಿಯರ್, ಹೇಮಾವತಿ ಯೋಜನೆ, ಗೊರೂರು,ರವರ ಪತ್ರ ಸಂಖ್ಯೆ:ಮುಇಂ ಹೇಯೋ/ತಾಂಸ-2/ಸಇಂ-2/2001-02, ದಿನಾಂಕ:23-11-2001.

ಪ್ರಸ್ತಾವನೆ :-

ಮೇಲೆ ಓದಲಾದ ಪತ್ರದಲ್ಲಿ ಮುಖ್ಯ ಇಂಜಿನಿಯರ್, ಹೇಮಾವತಿ ಯೋಜನೆ, ಗೊರೂರು,ರವರು ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ದಂಡಿಗನ ಹೋಬಳಿ ಹತ್ತಿರ ಕಾಚೇನಹಳ್ಳಿಯಲ್ಲಿ ಕಾಚೇನಹಳ್ಳಿ ಏತ ನೀರಾವರಿ ಯೋಜನೆಗಾಗಿ ರೂ.6830-00 ಲಕ್ಷಗಳ ಪರಿಷ್ಕೃತ ಅಂದಾಜನ್ನು ತಯಾರಿಸಿ ಅನುಮೋದನೆಗಾಗಿ ಮಂಡಿಸಿರುತ್ತಾರೆ. ಮುಖ್ಯ ಇಂಜಿನಿಯರ್‌ರವರು ತಮ್ಮ ಪ್ರಸ್ತಾವನೆಯಲ್ಲಿ ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ದಂಡಿಗನ ಹೋಬಳಿಯ ಕುಂಬೇನಹಳ್ಳಿ ಗ್ರಾಮದ ಹತ್ತಿರ ಕಾಚೇನಹಳ್ಳಿ ಏತ ನೀರಾವರಿ ಯೋಜನೆಯನ್ನು ನಿರ್ಮಿಸಲು ಉದ್ದೇಶಿಸಿರುತ್ತಾರೆ. ಈ ಯೋಜನೆಗೆ ಸರ್ಕಾರಿ ಆದೇಶ ಸಂಖ್ಯೆ:ನೀಇ 1 ಎನ್‌ಹೆಚ್‌ಟಿ 91, ದಿನಾಂಕ:27-12-91; ರಲ್ಲಿ ರೂ.890 ಲಕ್ಷಗಳಿಗೆ ಖಾರೀಫ್ ಋತುವಿನಲ್ಲಿ 8000 ಎಕರೆ ಅರೆ ಖುಷ್ಕಿ ಮತ್ತು ರಬಿ ಬೆಳೆಯಲ್ಲಿ 5500 ಎಕರೆ ಪ್ರದೇಶಕ್ಕೆ 0.73 ಟಿ.ಎಂ.ಸಿ. ನೀರನ್ನು ಹೇಮಾವತಿ ನದಿಯ ನೀರಿನಿಂದ ಎರಡು ಹಂತಗಳಲ್ಲಿ ನೀರನ್ನು ಎತ್ತಿ ಕಾರ್ಯರೂಪಕ್ಕೆ ತರಲು ಉದ್ದೇಶಿಸಿರುತ್ತಾರೆ.

2. ತದನಂತರ ತಾಂತ್ರಿಕ ಸಲಹಾ ಸಮಿತಿಯ ಸಲಹೆಯಂತೆ ರಾಬಿ ಬೆಳೆಯಲ್ಲಿ ಉದ್ದೇಶಿಸಲಾದ 5500 ಎಕರೆ ಅರೆ ಖುಷ್ಕಿ ನೀರಾವರಿಯನ್ನು ಕೈಬಿಟ್ಟು ಯೋಜನೆಯನ್ನು ಪರಿಷ್ಕರಿಸಿರುತ್ತಾರೆ. ಮೂಲ ಯೋಜನೆಯಲ್ಲಿ ಎರಡು ಹಂತಗಳಲ್ಲಿ ಏತ ನೀರಾವರಿ ಮೂಲಕ ನೀರಾವರಿಗೆ ನೀರು ಒದಗಿಸಲು ಉದ್ದೇಶಿಸಲಾಗಿತ್ತು. ಈ ಯೋಜನೆಯು ಪರಿಷ್ಕರಿಸಿದ ನಂತರ ಉಳಿತಾಯವಾಗುವ 0.267 ಟಿ.ಎಂ.ಸಿ. ನೀರಿನಿಂದ 3750 ಎಕರೆ ಪ್ರದೇಶಕ್ಕೆ ಗಂಡಸಿ ಹೋಬಳಿಯಲ್ಲಿ ನೀರಾವರಿ ಒದಗಿಸಲು ಉದ್ದೇಶಿಸಲಾಗಿದೆ. ಈ ಪರಿಷ್ಕೃತ ಪ್ರಸ್ತಾವನೆಯನ್ನೊಳಗೊಂಡಂತೆ ಮೂರು ಹಂತಗಳಲ್ಲಿ ಪಂಪ್‌ಗಳ ಮೂಲಕ ಹೇಮಾವತಿ ನದಿಯಿಂದ ನೀರನ್ನೆತ್ತಿ ನೀರಾವರಿ ಒದಗಿಸಲು ಉದ್ದೇಶಿಸಿರುತ್ತಾರೆ. ಸದರಿ ಯೋಜನೆಯ ಅಂದಾಜನ್ನು ತಾಂತ್ರಿಕ ಸಲಹಾ ಸಮಿತಿ ಮತ್ತು ಬೃಹತ್ ನೀರಾವರಿ ಯೋಜನೆಗಳ ನಿಯಂತ್ರಣ ಮಂಡಳಿಗಳ ಸಭೆಯಲ್ಲಿ ಪರಿಶೀಲಿಸಿ ರೂ.6330.00 ಲಕ್ಷಗಳ ಪರಿಷ್ಕೃತ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಸೂಕ್ತ ಶಿಫಾರಸ್ಸು ನೀಡಿರುತ್ತದೆ. 2002-03 ನೇ ಸಾಲಿನ ಆಯವ್ಯಯದಲ್ಲಿ ಹೇಮಾವತಿ ಯೋಜನೆಗೆ ನೀಡಿರುವ ರೂ.6600.00 ಲಕ್ಷಗಳ ಅನುದಾನದಡಿ ಪ್ರಾರಂಭಿಕ ಕಾಮಗಾರಿಗಳನ್ನು ಲೆಕ್ಕ ಶೀರ್ಷಿಕೆ - 4701 - ಅಡಿಯಲ್ಲಿ ಕೈಗೊಳ್ಳಲು ಉದ್ದೇಶಿಸಿದೆ.

3. ರಾಜ್ಯದಲ್ಲಿ ಈಗ ಅಸ್ತಿತ್ವದಲ್ಲಿರುವ ಏತ ನೀರಾವರಿ ಯೋಜನೆಗಳ ಕಾರ್ಯ ನಿರ್ವಹಣೆಯನ್ನು ಅವುಗಳಿಗೆ ಬೇಕಾಗುವ ವಿದ್ಯುತ್‌ಶಕ್ತಿ ದೊರಕುತ್ತಿರುವ ಸ್ಥಿತಿ ಇವುಗಳ ನಿರ್ವಹಣೆಯಲ್ಲಿ ಸ್ಥಳೀಯ ಜನರು ಪಾಲ್ಗೊಳ್ಳುತ್ತಿರುವ ಬಗ್ಗೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ತೀರ್ಮಾನದಂತೆ ರಾಜ್ಯದ ಏತ ನೀರಾವರಿ ಯೋಜನೆಗಳ ಬಗ್ಗೆ ಒಂದು ಸಮಗ್ರ ನೀತಿಯನ್ನು ನಿರೂಪಿಸಿ ಆದರಡಿ ರಾಜ್ಯದಲ್ಲಿರುವ ಎಲ್ಲಾ ಏತ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಳ್ಳುವಂತೆ ನಿರ್ಧರಿಸಲಾಯಿತು.

........2..,

- 261 -



4. ಈ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಲಾಗಿದೆ.

<u>ಸರ್ಕಾರಿ ಆದೇಶ ಸಂಖ್ಯೆ: ಜಸಂಇ 35 ಎನ್‌ಹೆಚ್‌ಬಿ 99, ಬೆಂಗಳೂರು, ದಿನಾಂಕ:19-10-2002</u>

ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ಕಾಚೇನಹಳ್ಳಿ ಏತ ನೀರಾವರಿ ಯೋಜನೆಗೆ ತಯಾರಿಸಲಾದ ರೂ.6830-00 ಲಕ್ಷಗಳ (ರೂಪಾಯಿ ಆರು ಸಾವಿರದ ಎಂಟು ನೂರ ಮೂವತ್ತು ಲಕ್ಷಗಳು ಮಾತ್ರ) ಪರಿಷ್ಕೃತ ಅಂದಾಜಿಗೆ ಈ ಕೆಳಕಂಡ ಷರತ್ತಿಗೊಳಪಟ್ಟು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ:-

a. ಸದರಿ ಯೋಜನೆಯನ್ನು ಕೈಗೆತ್ತಿಕೊಳ್ಳುವ ಮೊದಲು ರಾಜ್ಯದಲ್ಲಿ ರೂಪಿಸಲಾದ ಏತ ನೀರಾವರಿ ಯೋಜನೆಗಳ ನೀತಿಯನ್ನು ನಿರೂಪಿಸುವ ಎಲ್ಲಾ ಅಂಶಗಳನ್ನು ಅಳವಡಿಸಿ ವಿವರವಾಗಿ ಅಂದಾಜನ್ನು ತಯಾರಿಸಿ ತಾಂತ್ರಿಕ ಅನುಮೋದನೆ ನೀಡುವ ಮೊದಲು ಸರ್ಕಾರಕ್ಕೆ ಮಾಹಿತಿ ಸಲ್ಲಿಸಿ ಅನುಮತಿ ಪಡೆದು ನಂತರ ಕಾಮಗಾರಿಯನ್ನು ಕೈಗೆತ್ತಿಕೊಳ್ಳತಕ್ಕದ್ದು.

b. ಸದರಿ ಯೋಜನೆಗೆ ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ - 4701 - 392 - ಯೋಜನೇತರ - ಅಡಿಯಲ್ಲಿ ಒದಗಿಸಲಾದ ಅನುದಾನದಡಿ ಭರಿಸತಕ್ಕದ್ದು.

2. ಈ ಆದೇಶವನ್ನು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ: ಲೋಇ 215 ಆಕೋ-1/2002, ದಿನಾಂಕ:22-06-2002, ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

19/10
(ಎ.ಎಲ್. ಜಗದೀಶ್)
ವಿಶೇಷ ಕರ್ತವ್ಯಾಧಿಕಾರಿ (ತಾಂತ್ರಿಕ, ಎಂಎಂಐ-3),
ಜಲ ಸಂಪನ್ಮೂಲ ಇಲಾಖೆ.

<u>ಇವರಿಗೆ</u>:-

1. ಮಹಾಲೇಖಪಾಲರು (ಲೆಕ್ಕ ಪತ್ರ / ಲೆಕ್ಕ ಪರಿಶೋಧನೆ), ಕರ್ನಾಟಕ, ಬೆಂಗಳೂರು
2. ಮಾನ್ಯ ಮುಖ್ಯ ಮಂತ್ರಿಗಳ ಪ್ರಧಾನ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು.
3. ಮುಖ್ಯ ಇಂಜಿನಿಯರ್, ಹೇಮಾವತಿ ಯೋಜನೆ, ಗೊರೂರು
4. ಸರ್ಕಾರದ ಉಪ ಕಾರ್ಯದರ್ಶಿಗಳು, ಸಚಿವ ಸಂಪುಟ ವ್ಯವಹಾರಗಳ ಇಲಾಖೆ (ಸಚಿವ ಸಂಪುಟ), ವಿಧಾನ ಸೌಧ, ಬೆಂಗಳೂರು (ವಿಷಯ ಸಂಖ್ಯೆ: ಸಿ - 302/2002)
5. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ (ಆರ್ಥಿಕ ಕೋಶ), ವಿಧಾನ ಸೌಧ, ಬೆಂಗಳೂರು.
6. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು

## ಕರ್ನಾಟಕ ಸರ್ಕಾರ

ಸಂಖ್ಯೆ: ಜಸಂಇ 35 ಎನ್‌ಹೆಚ್‌ಪಿ 99

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 30-10-2002.

### ಅಡೆಂಡಮ್

ವಿಷಯ: ಕಾಚೇನಹಳ್ಳಿ ಏತ ನೀರಾವರಿ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ: ಸರ್ಕಾರಿ ಆದೇಶ ಸಂಖ್ಯೆ: ಜಸಂಇ 35 ಎನ್‌ಹೆಚ್‌ಪಿ 99, ದಿನಾಂಕ:19-10-2002.

++ ++ ++

ಉಲ್ಲೇಖಿತ ಸರ್ಕಾರಿ ಆದೇಶದಲ್ಲಿನ ಆದೇಶ ಭಾಗದ (a) ಮತ್ತು (b) ಷರತ್ತುಗಳ ನಂತರ ಈ ಕೆಳಕಂಡ ಷರತ್ತನ್ನು ಸೇರಿಸಿ ಓದಿಕೊಳ್ಳತಕ್ಕದ್ದು.

(c) ಸದರಿ ಕಾಮಗಾರಿಯನ್ನು ಕರ್ನಾಟಕ ನೀರಾವರಿ ನಿಗಮ ನಿಯಮಿತದ ವತಿಯಿಂದ ಕೈಗೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

30/10/02
(ಸಿ.ಎಲ್. ಜಗದೀಶ್)
ವಿಶೇಷ ಕರ್ತವ್ಯಾಧಿಕಾರಿ(ತಾಂತ್ರಿಕ, ಎಂಎಂಪಿ-3),
ಜಲ ಸಂಪನ್ಮೂಲ ಇಲಾಖೆ

ಇವರಿಗೆ:-

1. ಮಹಾಲೇಖಪಾಲರು (ಲೆಕ್ಕ ಪತ್ರ / ಲೆಕ್ಕ ಪರಿಶೋಧನೆ), ಕರ್ನಾಟಕ, ಬೆಂಗಳೂರು
2. ಮಾನ್ಯ ಮುಖ್ಯ ಮಂತ್ರಿಗಳ ಪ್ರಧಾನ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು.
3. ಮುಖ್ಯ ಇಂಜಿನಿಯರ್, ಹೇಮಾವತಿ ಯೋಜನೆ, ಗೊರೂರು
4. ಸರ್ಕಾರದ ಉಪ ಕಾರ್ಯದರ್ಶಿಗಳು, ಸಚಿವ ಸಂಪುಟ ವ್ಯವಹಾರಗಳ ಇಲಾಖೆ (ಸಚಿವ ಸಂಪುಟ), ವಿಧಾನ ಸೌಧ, ಬೆಂಗಳೂರು (ವಿಷಯ ಸಂಖ್ಯೆ: ಸಿ-302/2002)
5. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ (ಆರ್ಥಿಕ ಕೋಶ), ವಿಧಾನ ಸೌಧ, ಬೆಂಗಳೂರು.
6. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು